

# ತಾಂಬೂಲ ಪುರಾಣ

ಶುಭ ಸಮಾರಂಭಗಳಿಗೆ ಬಂದವರಿಗೆ ಊಟವಾದ ಬಳಿಕ ತಾಂಬೂಲ ಕೊಡುವುದು ಅನಾದಿ ಕಾಲದಿಂದ ಬೆಳೆದು ಬಂದ ಸಂಪ್ರದಾಯ. ಆದರೆ ಇಂದಿನ ಆಧುನಿಕತೆಯ ಭರದಲ್ಲಿ ತಾಂಬೂಲ ಶಾಸ್ತ್ರ ಶೋಕಿಯಾಗುತ್ತಿದೆ ಎಂಬುದು ಆತಂಕದ ವಿಚಾರ. ಈ ತಾಂಬೂಲದ ಹಿಂದೆ ಉತ್ತಮ ಆಶಯ ಇದೆ, ಸಂಸ್ಕೃತಿ, ಪದ್ಧತಿ, ಸಂಪ್ರದಾಯದ ಪ್ರತೀಕವಾಗಿರುವ ತಾಂಬೂಲದ ಬಗೆಗಿನ ರಸವತ್ತಾದ ವಿಶ್ಲೇಷಣೆ ಇಲ್ಲಿದೆ..

■ ಸಾವಿತ್ರಿ ಕೆ. ಅಲ್ಲೂರ್



ತಾಂಬೂಲ ಸಾಂಪ್ರದಾಯಿಕತೆಯ ಸಂಕೇತ. ಎಲೆ, ಅಡಿಕೆ, ಸುಣ್ಣ ಸೇರಿದಾಗ ತಾಂಬೂಲವಾಗುತ್ತದೆ. ಈ ತಾಂಬೂಲಕ್ಕೆ ಬಹಳ ದೊಡ್ಡ ಗೌರವದ ಸ್ಥಾನವಿದೆ. ಹಿಂದಿನ ಕಾಲದಿಂದಲೂ ದೇವರ ಪೂಜೆಗೆ ಈ ತಾಂಬೂಲದ ಜತೆಯಲ್ಲಿ ಹಣ್ಣು ಕಾಯಿಗಳನ್ನು ದೇವರಿಗೆ ಸಮರ್ಪಣೆ ಮಾಡುವುದು ಸಂಪ್ರದಾಯವಾಗಿ ಬಂದಿದೆ.

ಮನೆಗೆ ಬಂದ ಮುತ್ತೈದೆಯರಿಗೆ ಕುಂಕುಮ, ಜತೆಗೆ ತಾಂಬೂಲದ ಜತೆಯಲ್ಲಿ ಕಲ್ಲು ಸಕ್ಕರೆ, ಬೆಲ್ಲ, ಹಣ್ಣು ಕಾಯಿ ಕೊಡುವುದು ಪದ್ಧತಿ. ಸಂಪ್ರದಾಯದ ಪ್ರಕಾರ ಮನೆಗೆ ಬಂದವರನ್ನು ಬರಿ ಕೈಯಲ್ಲಿ ಕಳಿಸುವುದು ಸರಿಯಲ್ಲ ಎಂಬ ಕಾರಣಕ್ಕೆ ಈ ಸಂಪ್ರದಾಯ ಹುಟ್ಟಿ ಕೊಂಡಿತು. ಸಮಾರಂಭಗಳಲ್ಲಿ, ಮನೆಗಳಲ್ಲಿ ಮಧ್ಯಾಹ್ನ ಊಟವಾದ